Regd No BG 155

Sri "SATYAVADI"
— DAILY —
MYSORE 4
46 th Year

Protect the cow

21—4—1962

ಸತ್ಯವಾದಿ
SATYAVADI

ಸ್ಥಾಪಕರು— ಆರಮನೆ ಸಿಂಪ್ಸೇದಾರ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಸಮಸ್ತ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಪಾರ್ಲಿಮೆಂಟ್ ಸದಸ್ಯರಿಗೆ ವೇತನ ಏರಿಕೆಯಾಗಬೇಕು

ಪಾರ್ಲಿಮೆಂಟು ಸದಸ್ಯರ ವೇತನ ಹಾಗೂ ಭತ್ಯೆಗಳನ್ನು ಹೆಚ್ಚಿಸಬೇಕೆಂಬ ಪ್ರಯತ್ನ ಕಾಂಗ್ರೆಸು ಪಾರ್ಲಿಮೆಂಟರಿ ಪಕ್ಷದ ಸದಸ್ಯರಲ್ಲಿ ಇರುವದಾಗಿ ನವ ದೆಹಲಿ ವಾರ್ತೆ ತಿಳಿಸುತ್ತದೆ. ತಿಂಗಳಿಗೆ ರೂ 400 ರಿಂದ 500 ಕ್ಕೆ ವೇತನ ಹೆಚ್ಚಿಸಬೇಕೆಂದು ಮತ್ತು ರೂ 21 ರಿಂದ 25 ರ ಪರಿಗೆ ದಿನಭತ್ಯ ಹೆಚ್ಚಿಸಬೇಕೆಂದು ಕೆಲವು ಕಾಂಗ್ರೆಸು ಸದಸ್ಯರು ಪಾರ್ಲಿಮೆಂಟರಿ ಕಾಂಗ್ರೆಸು ಪಕ್ಷದ ಕಾರ್ಯಕಾರಿ ಸಮಿತಿಗೆ ತಿಳಿಸಿದರೆಂದು ವಂದಿಯಾಗಿದೆ. ಇದರೊಡನೆ ಸುಸಜ್ಜಿತವಾದ ಗೃಹವನ್ನು ಅಪೇಕ್ಷಿಸಿದ್ದಾರೆ. ಈ ಸೂಚನೆಗೆ ಕಾಂಗ್ರೆಸು ನಾಯಕರ ಪ್ರತಿಕ್ರಿಯೆ ಏನೆಂಬುದು ತಿಳಿದಿಲ್ಲ ಕಾರ್ಯಕಾರಿ ಸಮಿತಿಯ ಮುಂದೆ ಇದು ಬೇಗನೆ ಚರ್ಚೆಗೆ ಬರುವುದು

ಹೋಳ್ಕರ್ ಮಗಳಿಗೆ ಗಾದಿ

ಇಂದೂರಿನ ಮಾಜಿ ಹೋಳ್ಕರರ ಮಗಳನ್ನು ಗಾದಿಯ ಉತ್ತರಾಧಿಕಾರಿಯೆಂದು ಪರಿಗಣಿಸಲು ಭಾರತ ಸರ್ಕಾರ ನಿರ್ಧರಿಸಿದೆ ಹೋಳ್ಕರರ ಮಗ ಅಮೆರಿಕದ ಪೌರನಾಗಿರುವದರಿಂದ ಅವರಿಗೆ ಗಾದಿ ಹಕ್ಕು ಹೋಗಿದೆ.

ತಾಮ್ರ ಸಿಕ್ಕಿದೆ

ಭಾರತ—ಪಾಕಿಸ್ತಾನ ಗಡಿ ರಕ್ಷಣ ಪಡೆಗಳಲ್ಲಿ ಪಾಕಿಸ್ತಾನ ಅಕ್ರಮ ಸಾಗಾಣಿಕೆಗಾರರಿಗೂ ಭಾರತದ ಗಡಿ ಪೋಲೀಸರಿಗೂ 1 ಗಂಟೆ ಹೊಡೆದಾಟವಾಗಿ ಇಬ್ಬರು ಪಾಕಿಸ್ತಾನಿಗಳು ಸತ್ತರು.

೦೦೦

ಭಾರತದ ಬಗ್ಗೆ ಚೀನೀಯರ ನೀತಿಯಲ್ಲಿ ಯಾವ ಬದಲಾವಣೆಯೂ ಕಂಡು ಬಂದಿಲ್ಲವೆಂದು ವಿದೇಶಾಂಗಉಪಮಂತ್ರಿ ಶ್ರೀಮತಿ ಲಕ್ಷ್ಮೀ ಮೆನನರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು

40-50 ಕೋಟಿ ತೆರಿಗೆ ವಿಧಿಸುವ ಅಂದಾಜುಪಟ್ಟಿ

ಭಾರತ ಸರ್ಕಾರದ ಹಣಕಾಸಿನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಲೋಕಸಭೆಯಲ್ಲಿ ಸೋಮವಾರ ಅಂದಾಜುಪಟ್ಟಿಯನ್ನು ಮಂಡಿಸುವರು ಈಗ ಇರುವ ಸೂಚನೆಯ ಪ್ರಕಾರ ಅವರು ಮಂಡಿಸುವ ಅಂದಾಜುಪಟ್ಟಿ ರೂ 40—50 ಕೋಟಿ ವರಿಗೆ ತೆರಿಗೆಯಿಂದ ಕೂಡಿರುವದು

ನೇಪಾಳದ ನೀತಿಯಲ್ಲ

ನವ ದೆಹಲಿಯಲ್ಲಿರುವ ವಿಶ್ವ ವ್ಯವಹಾರ ಭಾರತೀಯ ಸಮಿತಿಯನ್ನುದ್ದೇಶಿಸಿ ನೇಪಾಳದ ದೊರೆ ಮಹೇಂದ್ರರು ನಿನ್ನೆ ಭಾಷಣ ಮಾಡುತ್ತಾ, ಭಾರತ ಹಾಗೂ ಚೀನಾದೊಡನೆ ತನಗಿರುವ ಬಾಂಧವ್ಯದಲ್ಲಿ ಒಬ್ಬರ ವೇಲೆ ಮತ್ತೊಬ್ಬರನ್ನು ಎತ್ತಿಕಟ್ಟುವುದು ನೇಪಾಳದ ನೀತಿಯಲ್ಲ ಎಂದು ತಿಳಿಸಿದರು ನೇಪಾಳ ಹಾಗೂ ಭಾರತದ ಬಾಂಧವ್ಯ ಸಾಂಪ್ರದಾಯಿಕ ಹಾಗೂ ಚಾರಿತ್ರಿಕವಾದದ್ದು ಎಂದು ದೊರೆಗಳು ತಿಳಿಸಿದರು.

× ಬ್ರಿಟನಿಯಿಂದ ಎಂಡು ಗ್ಯಾಮಿಗಳನ್ನು ಬಟ್ಟಿಗಳ ವೇಲೆ ದೆವ್ವಗಳು ಆಕ್ರಮಣ ಮಾಡುವವು ಎಂಬ ದೂರಿನ ಬಗ್ಗೆ ಪತ್ತೆ ಮಾಡಲು ಪೋಲೀಸರು ಆರಂಭಿಸಿದ್ದರು ಅಮೆರಿಕಾದಲ್ಲಿ ಇತ್ತೀಚಿಗೆ ದೆವ್ವಗಳು ಒಬ್ಬನನ್ನು ಬಹಿರಂಗ ಸ್ಥಳದಲ್ಲಿ ಬೆತ್ತಲೆ ನಿಲ್ಲಿಸಿದವು

× ರಾಜ್ಯದ 19 ಜಿಲ್ಲೆಗಳ ಪೈಕಿ 16ಜಿಲ್ಲೆಗಳಲ್ಲಿ ಪ್ರಾಣಕ್ಷತಿಬಂಧ ಜಾರಿಗೆ ಬಂದಿದೆ 8 ಲಕ್ಷ ಜನರು ನಿರುದ್ಯೋಗಿಗಳಾಗಿರುವರು ಎಂದು ಶ್ರೀ ವೆಂಕಟಸ್ವಾಮಿಯವರು ಮೊನ್ನೆ ದಾವಣಗೆರೆಯಲ್ಲಿ ತಿಳಿಸಿದರು

× ಖಟಮಂಡು-ಲಾಸ ಏಸ್ಸೆಯ ಸರ್ವೆಯನ್ನು ನವ ಚೀನಾದ ತಾಂತ್ರಿಕರು ಮುಗಿಸಿರುವರೆಂದು ನೇಪಾಳದ ಸಂಪರ್ಕ ಮಂತ್ರಿ ಶ್ರೀ ಲಲಿತ ಚಂದರು ನಿನ್ನೆ ಪಟ್ಟಣಂಡುವಿನಲ್ಲಿ ತಿಳಿಸಿದರು.

ರಷ್ಯದ ನಿಲುವಿನಲ್ಲಿ ಬದಲಾವಣೆ ಇಲ್ಲ

ಜಿನೀವಾ ನಿಶ್ಶಸ್ತ್ರೀಕರಣ ಸಮ್ಮೇಳನದಲ್ಲಿ ರಷ್ಯ ನಿಯೋಗದ ನಾಯಕರು ಅಗಿರುವ ವಿಶ್ವಸಂಸ್ಥೆಗೆ ರಷ್ಯದ ಖಾಯಂ ಪ್ರತಿನಿಧಿ ಜೋರ್ಜರು, ಜಿನೀವಾದಲ್ಲಿ ಕರಾಚಿಯ ಡಾನ್ ಪ್ರತಿನಿಧಿಯೊಂದಿಗೆ ಮಾತನಾಡುತ್ತಾ, ಕಾಶ್ಮೀರದ ಬಗ್ಗೆ ರಷ್ಯದ ನಿಲುವಿನ ಬಗ್ಗೆ ಯಾವ ಬದಲಾವಣೆಯೂ ಇಲ್ಲ ಎಂದರು ವಂಡಿತವಾಗಿ ಒಂದು ನಿರ್ಣಯದ ವೇಲೆ ರಷ್ಯದ ವೀಟೋ ಅವಲಂಬಿಸುವದು ಎಂದವರು ತಿಳಿಸಿದರು

ಒಪ್ಪುವುದಿಲ್ಲ

ಜಾತ್ಯತೀತ ಭಾರತ ವಿಭಜನೆಯ ಫಲವಾದ ಜಾತ್ಯಾಕಾಂಡದಲ್ಲಿ ಈಗಾಗಲೇ ಪ್ರವೇಶಿಸಿರುವದರಿಂದ, ಒಂದು ರಾಜ್ಯ—ಒಂದು ಧರ್ಮ ವೇಲಿನ ಕಾಶ್ಮೀರದ ವೇಲಿನ ಪಾಕಿಸ್ತಾನದ ಬೇಡಿಕೆಯನ್ನು ಒಪ್ಪಲಾಗುವದಿಲ್ಲ ಎಂದು ವಿಶ್ವ ಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿ ಆಗಿರುವ ಶ್ರೀ ಸಿ ಎಸ್ ಜಾತವರು ಮೊನ್ನೆ ರಾತ್ರಿ ನ್ಯೂಯಾರ್ಕಿನಲ್ಲಿ ತಿಳಿಸಿದರು.

ತಕರಾರು ಅರ್ಜಿಗಳು

ಈ ವರ್ಷ ನಡೆದ ಮಹಾ ಜುನಾವಣೆಗಳಲ್ಲಿ ಅಕ್ರಮಗಳು ಮತ್ತು ಅಕಾರ್ಯಗಳು ನಡೆದಿರುವದಾಗಿ ಆರೋಪ ಹೊರಿಸಿದ 344 ತಕರಾರು ಅರ್ಜಿಗಳು ಬಂದಿವೆ. ಮೈಸೂರು ರಾಜ್ಯದ ವಿಧಾನ ಸಭೆ ಜುನಾವಣೆಕ್ಕೇತ್ರಗಳಿಗೆ ಸಂಬಂಧಿಸಿದಂತೆ 18 ತಕರಾರು ಅರ್ಜಿಗಳು ಬಂದಿವೆ

× ಚಿಂತಾಮಣಿ ಹತ್ತಿರ ಅಸ್ಸಾಮಿನ ಕಾಸು ಬಟ್ಟೆಗಳ ಒಳಿ ತಾಮ್ರ ದೊರೆತಿದೆ.

ವಿವಿಧ ವಿಷಯಗಳು

ಪಶ್ಚಿಮ ಬಂಗಾಳದಲ್ಲಿ ಥರ್ಮಲ್ ಪವರ್ ಯಂತ್ರವನ್ನು ಸ್ಥಾಪಿಸಲು ಮತ್ತು ಬಿಹಾರಿನಲ್ಲಿ ಕಲ್ಲಿದ್ದಲು ವಾಷರಿ ಯಂತ್ರ ಸ್ಥಾಪಿಸಲು 4 ಕೋಟಿ 25 ಲಕ್ಷ ಡಾಲರುಗಳ 2 ಸಾಲವನ್ನು ಕೊಡವದಾಗಿ ಅಂತರರಾಷ್ಟ್ರೀಯ ಅಭಿವೃದ್ಧಿ ಫಂಡ್ ಸಂಸ್ಥೆಯು ಮುಖ್ಯರ್ಜಿಯ ಫೌಲ್ಡರ್ ಹ್ಯಾಮಿಲ್ಟನ್ನಿಗೆ ವಾಷಿಂಗ್ಟನ್ನಲ್ಲಿ ತಿಳಿಸಿದರು.

ನವ ದೆಹಲಿಯಲ್ಲಿ ಸಮಾವೇಶವಾಗಿರುವ ಲೋಕಸಭೆಯಲ್ಲಿ ಸೋಮವಾರ ಡೆಪ್ಯೆ ಸ್ಪೀಕರರ ಚುನಾವಣೆ ನಡೆಯುವುದು ಕಾಂಗ್ರೆಸಿನ ಪರವಾಗಿ ಶ್ರೀ ಎಸ್ ವಿ ಕೃಷ್ಣಮೂರ್ತಿರಾಯರು, ವಿರೋಧಪಕ್ಷದ ಪರವಾಗಿ ಶ್ರೀ ಜಯಪಾಲಸಿಂಗರು ಸ್ಪರ್ಧಿಸುವರು.

ಬೊಂಬಾಯಿನಿಂದ ಬಂದಿಂಗ ವಂದಿ ಪ್ರಕಾರ ಕೇಂದ್ರ ರೈಲ್ವೆಯ ವಾರ್ನಿಷ್ ಕಾರ್ಖಾನೆಯಲ್ಲಿ ನಿನ್ನೆ ಉದ ಬೆಂಕಿ ಅನಾಹುತದಿಂದ ನಾಲ್ವರು ಸುಟ್ಟು ಪತ್ತು ಹೋದರು. ಎಂಟು ಜನರು ಗಾಯಗೊಂಡಿದ್ದು ಮೂರು ಹೊಂದಿಸುವರೆಂದು ನಂಬಲಾಗಿದೆ ಮತ್ತೆರಡುವರು ಧೂಳಿನಲ್ಲಿ ಮುಚ್ಚಲ್ಪಟ್ಟಿರುವರೆಂದು ನಂಬಲಾಗಿದೆ.

ಬಾಹ್ಯಾಂತರಿಕ್ಷದ ಅಂತರಾಷ್ಟ್ರೀಯ ಪರಿಷತ್ತಿನಲ್ಲಿ ಭಾಗವಹಿಸಲು ಈ ತಿಂಗಳಿನ ಅಂತ್ಯದಲ್ಲಿ ರಷ್ಯದ ಗಗನಯಾತ್ರಿ ಫೆರ್ಮಾರ್ ತೀತೋವ್ ವಾಷಿಂಗ್ಟನ್ನಿಗೆ ಆಗಮಿಸುವರು.

ಮೊನ್ನೆ ರಾಜ್ಯ ಸಭೆ ಅಂಗೀಕರಿಸಿದ ಔಷಧಿ ತಿದ್ದುಪಡಿ ಮಸೂದೆಯಲ್ಲಿ ಸೌಂದರ್ಯ ಪ್ರಸಾಧನ ವಸ್ತುಗಳಲ್ಲಿ ಖತಬೂನನ್ನು ಸೇರಿಸಿಲ್ಲ

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಪಂಪಶ್ಯಾಸ್ತ್ರಿ ಜೋಯಿಸರಿಂದ

22 ದ್ವಿತೀಯ ವಿಕಾಸ

"ಇಂದಿನ" ಭಾರತ ಪ್ರದರ್ಶನ

ಪ್ಯಾಗ್— ಬೊಹೀವಿಯಾದ ಪ್ಲಜೆನ್ನು ನಗರದ ಲೆನಿನ್ ಸಂಯುಂಕ್ತದಲ್ಲಿ ಭಾರತದ ಜನಜೀವನ ಮತ್ತು ಆರ್ಥಿಕ ಪ್ರಗತಿಯನ್ನು ವಿವರಿಸುವ 140 ಛಾಯಾಚಿತ್ರಗಳ ಪ್ರದರ್ಶನವು ಈಗ ನಡೆಯುತ್ತಿದೆ.

ಶಾಂತಿ ಸೈಕಲ್ ಸ್ಪರ್ಧೆ

ಪ್ಯಾಗ್‌ನಲ್ಲಿ ಮೇ ದಿನಾಂಕ 2 ರಂದು ಜಗತ್ತಿನ ಅತ್ಯುನ್ನತ ದೊಡ್ಡ ಹವ್ಯಾಸಿ ಸೈಕಲ್ಲು ಸ್ಪರ್ಧೆ ಪ್ರಾರಂಭವಾಗಲಿದೆ ; ಈ ಬರ್ಲಿನ್ ಪ್ಯಾಗ್-ವಾರ್ಸಾ ಶಾಂತಿ ಸ್ಪರ್ಧೆಯಲ್ಲಿ ಎಲ್ಲ ದೇಶಗಳ ಕ್ರೀಡಾಕಾರರೂ ಭಾಗವಹಿಸುವರು : ಇತ್ತೀಚೆಗೆ ಪಶ್ಚಿಮ ಜರ್ಮನಿಯ ಕ್ರೀಡಾಕಾರರ ಮೇಲೆ ಈ ಬಗ್ಗೆ ಪ್ರತಿಬಂಧಕಗಳನ್ನೊಡ್ಡಲಾಗಿದೆಯಾದರೂ ಸಹಾ ಅವರಿಗೂ ಕೂಡ ಆಮಂತ್ರಣವನ್ನು ಕಳಿಸಿಕೊಡಲಾಗಿದೆ

ಪುಠಂದರ ದಾಸರು ಕಂಡ ಲೋಕದ ರೀತಿನೀತಿಗಳು

.... ಇನ್ನೊಬ್ಬರ ಕಷ್ಟ ತಿಳಿಯದವರು ....

ಇಂಥ ಜನರಿಂದ ಕೂಡಿದ ಲೋಕದಲ್ಲಿ ಎಲ್ಲಿ ಹೋದರೂ ಸುಖವಿಲ್ಲದಂತಾಗಿದೆ ; ಇಲ್ಲಿ ಎಲ್ಲರ ಸೇವೆ ಮಾಡಿದರೂ ಒಳ್ಳೆಯ ದಾಯುತೆಂದು ಹೇಳುವವರಿಲ್ಲ ; ಎಲ್ಲರೂ ತಪ್ಪುಗಳನ್ನೆಣಿಸುವವರೇ ಆಗಿದ್ದಾರೆ, ಸಂಸಾರದಲ್ಲಿದ್ದು ಕಷ್ಟಪಡಿಸುವುದು, ಮುಸರೆ ತಿಕ್ಕುವುದು, ಸೊಸೆಯ ಮತ್ತು ಮಗನ ಮಾತುಗಳನ್ನು ಕೇಳುವುದು ಅಸಹ್ಯವಾಗುತ್ತದೆ : ಮದ್ದಿನ ದೇಂನ್ನು ಕರಲು ಕೈಯಲ್ಲಿ ಕಾಸು ಇರುವದಿಲ್ಲ ; ಇದರಿಂದಾಗಿ ನೋವು ಬಲವಾಗುತ್ತದೆ ; ಇಲ್ಲಿ ಕೈಯಲ್ಲಿ ಹಣವಿದೆಯೆಂದು ತಿಳಿದು ದಾನಮಾಡುವವರಿಲ್ಲದೆ, ಉಳಿದವರಿಗೆ ಜೀವನ ನಡೆಸುವುದು ಕುತ್ತಿಗೆಯ ಮೇಲೆ ಬಂದಿರುತ್ತದೆ ; ಅವರು ಇದ್ದ ಕಡೆ ಇರಲು ಬಿಡುವುದಿಲ್ಲ ; ಇದ್ದಲ್ಲಿಂದ ಎದ್ದು ಬಂದರೆ ಸಟ್ಟುಕೊಳ್ಳುತ್ತಾರೆ : ಮಧ್ಯಾಹ್ನದ ಅನ್ನಕ್ಕೆ ಗತಿ ಇಲ್ಲದಾಗ ಒಂದು ದುಡ್ಡು ಕೇಳಿದರೆ ಯಾರೂ ಸಾಲಾ ಕೊಡುವುದಿಲ್ಲ : ಸೋಮವಾರದ ವ್ಯವಹಾರವನ್ನಾರಂಭಿಸುವಾಗ ಒಂದು ದೀಪ ಹಚ್ಚಲು ಗತಿಯಿಲ್ಲವುದಿಲ್ಲ ಮತ್ತು ಈ ಪರಿಸ್ಥಿತಿಯನ್ನು ಅನುಭವಿಸದವರೂ ಈ ಲೋಕದಲ್ಲಿ ಇರುವುದಿಲ್ಲ.

*

ಭಾರತದಲ್ಲಿ ಅಕ್ಕಿಯ ಬೆಳೆಯು 61-62 ರಲ್ಲಿ ಒಟ್ಟು 33 ದಶ ಲಕ್ಷ ಟನ್‌ಗಳಿಗೂ ಹೆಚ್ಚಾಗಿ ದೊರೆತಿದೆ.

೦೦೦೦

ಈಗ ಸುಮಾರು ಒಂದು ವರ್ಷದಿಂದ ಪ್ರತಿವಾರವೂ ಅಂಚೆಯಾತ ಪ್ರಧಾನ ಮಂತ್ರಿಗಳ ಮನೆಗೆ ಬಂದು ಡಾಲರು ಚಕ್ಕೊಂದನ್ನು ಕೊಟ್ಟುಹೋಗುತ್ತಿದ್ದಾನೆ ಈ ಚಕ್ಕನ್ನು ಪ್ರಧಾನ ಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ ಕಟ್ಟಲಾಗುತ್ತಿದೆ.

SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ಪ್ರಶಂಸನೀಯ 11 ನೆ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸುವ ಅತ ವೈಭವ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 20-4-62 ರಿಂದ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

Help The 'Gorakshana'

Advertise in Goraksana and help the pious cause







19 ನೇ ಶತಮಾನದಲ್ಲಿ ಅಮೇರಿಕಾದಲ್ಲಿ ಬಹು ಪ್ರಖ್ಯಾತ ವೂರುಗಳಲ್ಲಿ ಒಬ್ಬರಾದ ಪ್ರಥಮ ರೈಲ್ವೇ ಇಂಜನ್ನು ನಿರ್ಮಿಸಿದ, ಮತ್ತಿತರ ಅನೇಕ ದೇಶೋಪಯೋಗಿ ಕಾರ್ಯಗಳನ್ನು ನೆರವೇರಿಸಿದ ಪೀಟರ್ ಕೂಪರರ ಸಂಬಂಧಿಸಿದ ಚಿತ್ರಗಳು.

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.